# ಸರ್ವ ಜೀವನ ಕಲ್ಪ ಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು

ಕೃತಿರಮಣ ಪ್ರದ್ಯುಮ್ನ ವಸುದೇ
ವತೆಗಳಾಹಂಕಾರತ್ರಯದೊಳು
ಚತುರವಿಂಶತಿ ರೂಪದಿಂದಲಿ ಭೋಜ್ಯನೆನಿಸುವನು
ಹುತವಹಾಅಂತಗತ ಜಯಾ
ಪತಿಯು ತಾನೇ ಮೂರಧಿಕ ತ್ರಿಂ
ಶತಿ ಸುರೂಪದಿ ಭೋಕ್ತೃ ಎನಿಸುವ ಭೋಕ್ತೃಗಳೊಳಗಿದ್ದು ೦೧

ಆರಧಿಕ ಮೂವತ್ತು ರೂಪದಿ
ವಾರಿಜಾಪ್ತನೊಳಿರುತಿಹನು ಮಾ
ಯಾರಮಣ ಶ್ರೀವಾಸುದೇವನು ಕಾಲನಾಮದಲಿ
ಮೂರು ವಿಧ ಪಿತೃಗಳೊಳು ವಸು ತ್ರಿಪು
ರಾರಿ ಆದಿತ್ಯಗನಿರುದ್ಧನು
ತೋರಿಕೊಳ್ಳದೆ ಕಥೃಕಮಕ್ರಿಯನೆನಿಸಿಕೊಮ್ಬ ೦೨

ಸ್ವವಶ ನಾರಾಯಣನು ತಾ ಷ
ಣ್ಣವತಿ ನಾಮದಿ ಕರೆಸುತಲಿ ವಸು
ಶಿವ ದಿವಾಕರ ಕಥೃಕಮಕ್ರಿಯಗಳೊಳಗಿಧ್ಧು

ನೆವನವಿಲ್ಲದೆ ನಿತ್ಯದಲಿ ತ
ನ್ನವರು ಮಾಡುವ ಸೇವೆ ಕೈಕೊಂ
ಡವರ ಪಿತೃಗಳಿಗೀವನಮ್ಥಾನಮ್ಥ ಸುಖಗಳನು ॥೩

ತಂತುಪಟದಂದದಲಿ ಲಕುಮೀಕಾಂತ
ಪಂಚಾತ್ಮಕನೆನಿಸಿ ವಸು
ಕಂತುಹರ ರವಿ ಕಥೃಗಳೊಳಗಿಧ್ಧನವರಥ ತನ್ನ
ಚಿಂತಿಸುವ ಸಂತರನು ಗುರು ಮಧ್
ವಾಂತರಾತ್ಮ ಸಂತಯಿಸುವನು
ಸಂತತಖಿಳಾಥಗಳ ಪಾಲಿಸಿ ಇಹಪರಂಗಳಲಿ ॥೪

ತಂದೆತಾಯ್ಗಳ ಪ್ರೀತಿಗೋಸುಗ
ನಿಂದ್ಯಕಮವ ತೊರೆದು ವಿಹಿತಗ
ಳೊಂದು ಮೀರದೆ ಸಂಗಕಮಗಳಾಚರಿಸುವವರು
ವಂದನೀಯರಾಗಿಲೇಯೊಳಗೆ ದೈ
ನಂದಿನದಿ ದೈಶಿಕ ದಹಿಕ ಸುಖ
ದಿಂದ ಬಾಳ್ವರು ಬಹು ದಿವಸದಲಿ ಕೀತಿಯುತರಾಗಿ ॥೫

ಅಂಶಿ ಅಂಶಾಂತಗತ ತ್ರಯ
ಹಂಸವಾಹನ ಮುಖ್ಯ ದಿವಿಜರ
ಸಂಶದಲಿ ತಿಳಿದಂತರಾತ್ಮಕ ಜನಾದನನ
ಸಂಸ್ಮರಣ ಪೂವಕದಿ ಷಡಧಿಕ
ತ್ರಿಂಶತಿತ್ರಯ ರೂಪವರಿತು ವಿ

ಪಾಂಸಗನ ಪೂಜಿಸುವರವರೆ ಕೃಥಾತರೆನಿಸುವರು ೦೬

ಮುರುವರೆ ಸಾವಿರದ ಮೇಲರೆ
ನೂರ್ರೈದು ರೂಪದಿ ಜನಾದನ
ಸೂರಿಗಳು ಮಾಡುವ ಸಮಾರಾಧನೆಗೆ ವಿಘ್ನಗಳು
ಬಾರದಂತೆ ಬಹುಪ್ರಕಾರ ಖ
ರಾರಿ ಕಾಪಾಡುವನು ಸವಶ
ರೀರಗಳೊಳಿದ್ದವರವರ ಪೆಸರಿಂದ ಕರೆಸುತಲಿ ೦೭

ಜಯ ಜಯ ಜಯಾಕಾಂತ ದತ್ತಾ
ತ್ರೇಯ ಕಪಿಲ ಮಹಿದಾಸ ಭಕ್ತ
ಪ್ರಿಯ ಪುರಾತನ ಪುರುಷ ಪೂಣಾನಮ್ಧ ಜ್ಞ್ಯಾನಘನ
ಹಯವದನ ಹರಿ ಹಂಸ ಲೋಕ
ತ್ರಯ ವಿಲಅಣ ನಿಖಿಳಜಗದಾ
ಶ್ರಯ ನಿರಾಮಯ ದಯದಿ ಸಂತೈಸೆಂದು ಪ್ರಾಥಿಪುದು ೦೮

ಷಣ್ಣವತಿ ಯೆಂಬಅರೇಧ್ಯನು
ಷಣ್ಣವತಿ ನಾಮದಲಿ ಕರೆಸುತ
ತನ್ನವರು ಸದ್ಭಕ್ತಿ ಪೂವಕದಿಂದ ಮಾಡುತಿಹ
ಪುಣ್ಯಕಮವ ಸ್ವೀಕರಿಸಿ ಕಾ
ರುಣ್ಯ ಸಾಗರ ಸಲಹುವನು ಬ್ರ
ಹ್ಮಣ್ಯ ದೇವ ಭವಾಬ್ಧಿಪೋತ ಬಹು ಪ್ರಕಾರದಲಿ ೦೯

ದೇಹಗಳನು ಕೊಡುವವನು ಅವರವ
ರಾಹರವನು ಕೊಡದಿಹನೆ ಸುಮನಸ
ಮಹಿತ ಮಂಗಳ ಚರಿತ ಸದ್ಗುಣಭರಿತನನವರತ
ಅಹಿಕ ಪಾರತ್ರಿಕ ಸುಖಪ್ರದ
ವಹಿಸಿ ಬೆನ್ನಲಿ ಬೆತ್ತವಮೃಥವ
ದ್ರುಹಿಣ ಮೊದಲಾದವರಿಗುಣಿಸಿದ ಮುರಿದನಹಿತರನು ೧೦

ದ್ರುಹಿಣ ಮೊದಲಾದಮರರಿಗೆ ಸ
ನ್ಮಹಿತ ಮಾಯಾರಮಣ ತಾನೇ
ಸ್ವಹನೆನಿಸಿ ಸಮ್ಥೃಪ್ಥಿಪದಿಸುವ ಸವಕಾಲದಲಿ
ಪ್ರಹಿತ ಸಂಕರುಷನು ಪಿಥೃಗಳಿ
ಗಹರನೆನಿಪ ಸ್ವಧಾಖ್ಯರೂಪದಿ
ಮಹಿಜ ಫಲಥೃಣ ಪೆಸರಿನಲಿ ಪ್ರದ್ಯುಮ್ನನಿರುದ್ಧ ೧೧

ಅನ್ನನೆನಿಸುವ ನೃಪಶುಗಳಿಗೆ
ಹಿರಣ್ಯ ಗಭಾಂಡದೊಳು ಸಂತತ
ತನ್ನನೀಪರಿಯಿಂದುಪಾಸನೆಗೈವ ಭಕ್ತರನ
ಬನ್ನ ಪಡಿಸದೆ ಭವಸಮುದ್ರಮ
ಹೋನ್ನತಿಯ ದಾಟಿಸಿ ಚತುವಿಧ
ಅನ್ನಮಯನಾತ್ಮಪ್ರದ₹ಹನ ಸುಖವನೀವ ಹರಿ ೧೨

ಮನವಚನ ಕಾಯಗಳ ದೆಶೆಯಿಂ
ದನುದಿನದಿ ಬಿಡದಾಚರಿಸುತಿ

ಪ್ಪನುಚಿತೋಚಿತ ಕಮಗಳ ಸದ್ಭಕ್ತಿಪೂವಕದಿ
ಅನಿಲದೇವನೊಳಿಪ್ಪ ನಾರಾ
ಯಣಗಿದನ್ನವು ಎಂದು ಕೃಷ್ಣಾ
ಪಣವೆನುತ ಕೊಡೆ ಸ್ವೀಕರಿಸಿ ಸಂತೈಪ ಕರುಣಾಳು ೧೩

ಏಳು ವಿಧದನ್ನ ಪ್ರಕರಣವ
ಕೇಳಿ ಕೋವಿದರಾಸ್ಯದಿಂದಲಿ
ಆಲಸವ ಮಾಡದಲೆ ಅನಿರುದ್ಧಾದಿ ರೂಪಗಳ
ಕಾಲಕಾಲದಿ ನೆನೆದು ಪೂಜಿಸು
ಸ್ಥೂಲಮತಿಗಳಿಗಿದನು ಪೇಳದೆ
ಶ್ರೀಲಕುಮಿವಲ್ಲಭನೆ ಅನ್ನಾದನ್ನ ಅನ್ನದನು ೧೪

ಎಂದರಿದು ಸಪ್ತಾನ್ನಗಳ ದೈ
ನಂದಿನದಿ ಮರೆಯದೆ ಸದಾ ಗೋ
ವಿಂದಗಪಿಸು ನಿಭಯದಿ ಮಹಯಜ್ಞ್ಯವಿಧುಯೆಮ್ಧು
ಇಂದಿರೇಶನು ಸ್ವೀಕರಿಸಿ ದಯ
ದಿಂದ ಬೇಡಿಸಿಕೊಳದೆ ತವಕದಿ
ತಂದುಕೊಡುವನು ಪರಮಮಂಗಳ ತನ್ನ ದಾಸರಿಗೆ ೧೫

ಸೂಜಿ ಕರದಲಿ ಪಿಡಿದು ಸಮರವ
ನಾ ಜಯಿಸುವೆನು ಎಂಬ ನರನಂ
ತೀ ಜಗತ್ತಿನೊಳುಳ್ಳ ಅಜ್ಞ್ಯಾನಿಗಳು ನಿತ್ಯದಲಿ
ಶ್ರೀ ಜಗತ್ಪತಿಚರಣಯುಗಳ

ಸರೋಜ ಭಕ್ತಿಜ್ಞ್ಯಾನಪುವಕ
ಪೂಜಿಸದೆ ಧರ್ಮಾಹಕಾಮವ ಬಯಸಿ ಬಳಲುವರು ೧೬

ಶಕಟಭಂಜನ ಸಕಲಜೀವರ
ನಿಕಟಗನು ತಾನಾಗಿ ಲೋಕಕೆ
ಪ್ರಕಟನಾಗದೆ ಸಕಲಕಮವ ಮಾಡಿ ಮಾಡಿಸುತ
ಅಕುಟಿಲಾತ್ಮಕ ಭಕುತ ಜನರಿಗೆ
ಸುಖದನೆನಿಸುವ ಸವಕಾಲದಿ
ಅಕಟಕಟ ಈತನ ಮಹಾಮಹಿಮೆಗಳಿಗೇನೆಂಬೆ ೧೭

ಶ್ರೀಲಕುಮಿವಲ್ಲಭನು ವೈಕುಂ
ಠಾಲಯದಿ ಪ್ರಣವ ಪ್ರಕೃಥಿ ಕೀ
ಲಾಲಜಾಸನ ಮುಖ್ಯ ಚೇತನರೊಳಗೆ ನೆಲೆಸಿದ್ದು
ಮೂಲಕಾರಣ ಅಂಶನಾಮದಿ
ಲೀಲೆಗೈಸುತ ತೋರಿಕೊಳ್ಳದೆ
ಪಾಲಿನೋಳು ಘೃಥವಿಧ್ಧ ತೆರೆದಂತಿಪ್ಪ ತ್ರಿಸ್ಥಳದಿ ೧೮

ಮೂರು ಯುಗದಲಿ ಮೂಲರೂಪನು
ಸೂರಿಗಳ ಸಂತಯಿಸಿ ದಿತಿಯ ಕು
ಮಾರಕರ ಸಂಹರಿಸಿ ಧರ್ಮವನುಳುಹಬೇಕೆಂದು
ಕಾರುಣಿಕ ಭೂಮಿಯೊಳು ನಿಜಪರಿ
ವಾರಸಹಿತವತರಿಸಿ ಬಹುವಿಧ
ತೋರಿದನು ನರವಥ್ರ್ಪವೃಥ್ಧಿಯ ಸಕಲ ಚೇತನಕೆ ೧೯

www.yousigma.com

ಕಾರಣಾವ್ವಯ ಪ್ರಕೃಥಿಯೊಳಗಿ
ಧ್ಧಾರಧಿಕ ಹದಿನೆಂಟು ತತ್ವವ
ತಾ ರಚಿಸಿ ತದ್ರೂಪ ತನ್ನಾಮಂಗಳನೆ ಧರಿಸಿ
ನೀರಜಭವಾಂಡವನು ನಿಮಿಸಿ
ಕಾರುಣಿಕ ಕಾಯಾಖ್ಯರೂಪದಿ
ತೋರುವನು ಸಹಜಾಹಿತಾಚಲಗಳಲಿ ಪ್ರತಿದಿನದಿ ೨೦

ಜೀವರಂತಯಾಮಿ ಅಂಶಿ ಕ
ಳೇವರಗಳೊಳಗಿಂದ್ರಿಯಗಳಲಿ
ತಾ ವಿಹಾರ ಗೈವುತನುದಿನ ಅಂಶನಾಮದಲಿ
ಈ ವಿಷಯಗಳನುಂಡು ಸುಖಮಯ
ಈವ ಸುಖ ಸಂಸಾರದುಃಖವ
ದೇವ ಮಾನವ ದಾನವರಿಗವಿರತ ಸುಧಾಮಸಖ ೨೧

ದೇಶ ದೇಶವ ಸುತ್ತಿ ದೇಹಾ
ಯಾಸಗೊಳಿಸದೆ ಕಾಮ್ಯಕಮ ದು
ರಾಶೆಗೊಳಗಾಗದಲೆ ಬ್ರಹ್ಮಾದ್ಯಖಿಳಚೇತನರು
ಭೂ ಸಲಿಲಪಾವಕಸಮೀರಾ
ಕಾಶ ಮೊದಲಾದಖಿಳ ತತ್ತ್ವ ಪ
ರೇಶಗಿವಧಿಷ್ಠಾನವೆಂದರಿತಚಿಸನವರತ ೨೨

ಎರಡು ವಿಧದಲಿ ಲೋಕದೊಳು ಜೀ

ವರುಗಳಿಪ್ಪರು ಸಂತತ ಕ್ಷರಾಕ್ಷರ
ವಿಲಿಂಗ ಸಲಿಂಗ ಸೃಜ್ಯಾಸೃಜ್ಯ ಭೇದದಲಿ
ಕರೆಸುವುದು ಜಡಪ್ರಕೃಥಿ ಪ್ರಣವಾ
ಅರ ಮಹಾದಣುಕಾಲನಾಮದಿ
ಹರಿ ಸಹಿತ ಭೇದಗಳ ಪಂಚಕ ಸ್ಮರಿಸು ಸವತ್ರ ೨೩

ಜೀವ ಜೀವರ ಭೇದ ಜಡ ಜಡ
ಜೀವ ಜಡಗಳ ಭೇದ ಪರಮನು
ಜೀವ ಜಡ ಸುವಿಲಅಣನು ಎಂದರಿದು ನಿತ್ಯದಲಿ
ಈ ವಿರಿಂಚಾಂಡದೊಳು ಎಲ್ಲಾ
ಠಾವಿನಲಿ ತಿಳಿದೈದು ಭೇದ ಕ
ಳೇವರದೊಳರಿತಚ್ಯುತನ ಪದಯ್ಯೈದು ಶೀಘ್ರದಲಿ ೨೪

ಆದಿಯಲಿ ಅರಾಅರಾಖ್ಯ
ದ್ವೇಧ ಅಅರದೊಳು ರಮಾ ಮಧು
ಸೂದನರು ಅರಗಳೊಳು ಪ್ರಕ್ಇತಿ ಪ್ರಣವ ಕಾಲಗಳು
ವೇಧ ಮುಖ್ಯ ಥೃಣಾಮ್ಧ ಜೀವರ
ಭೇದಗಳನರಿತೀ ರಹಸ್ಯವ
ಬೋಧಿಸದೆ ಮಂದರಿಗೆ ಸವತ್ರದಲಿ ಚಿಂತಿಪುದು ೨೫

ದೀಪದಿಂ ದೀಪಗಳು ಪೊರಮ
ಟ್ಪಾಪಣಾಲಯಗತ ತಿಮಿರಗಳ
ತಾ ಪರಿಹಾರಗೈಸಿ ತದ್ಗತಪದಾಥ ತೋಪಂತೆ

www.yousigma.com

ಸೌಪರಣಿವರವಹನ ತಾ ಬಹು
ರೂಪನಾಮದಿ ಎಲ್ಲ ಕಡೆಯಲಿ
ವ್ಯಾಪಿಸಿದ್ದು ಯಥೇಷ್ಟಮಹಿಮೆಯ ತೋಪ ತಿಳಿಸದಲೆ ೨೬

ನಳಿನಮಿತ್ರಗೆ ಇಂದ್ರಧನು ಪ್ರತಿ
ಫಲಿಸುವಂತೆ ಜಗತ್ರಯವು ಕಂ
ಗೊಳಿಪುದನುಪಾಧಿಯಲಿ ಪ್ರತಿಬಿಂಬಾವ್ಹಯದಿ ಹರಿಗೆ
ತಿಳಿಯೆ ತ್ರಿಕಕುದ್ಧಾಮನತಿ ಮಂ
ಗಳ ಸುರೂಪವ ಸವತಾವಿಲಿ
ಪೊಳೆವ ಹೃಧಯಕೆ ಪ್ರಿತಿದಿವಸ ಪ್ರಹ್ಲಾದಪೋಷಕನು ೨೭

ರಸವಿಶೇಷದೊಳತಿ ವಿಮಲ ಸಿತ
ವಸನ ತೋಯಿಸಿ ಅಗ್ನಿಯೊಳಗಿಡೆ
ಪಸರಿಸುವುದು ಪ್ರಕಾಶ ನಸುಗುಂದದಲೆ ಸವತ್ರ
ತ್ರಿಶಿರದೂಷಣವೈರಿ ಭಕ್ತಿಸು
ರಸದಿ ತೋಯ್ದ ಮಹಾತ್ಮರನು ಬಾ
ಧಿಸವು ಭವದೊಳಗಿದ್ದರೆಯು ಸರಿ ದುರಿತರಾಸಿಗಳು ೨೮

ವಾರಿಧಿಯೊಳಗಖಿಳ ನದಿಗಳು
ಬೇರೆಬೇರೆ ನಿರಂತರದಲಿ ವಿ
ಹಾರ ಗೈವುತ ಪರಮ ಮೋದದಲಿಪ್ಪ ತೆರನಂತೆ
ಮೂರು ಗುಣನಗಳ ಮಾನಿಯೆನಿಸುವ
ಶ್ರೀರಮಾರೂಪಗಳು ಹರಿಯಲಿ

ತೋರುತಿಪ್ಪವು ಸವಕಾಲದಿ ಸಮರಹಿತವೆನಿಸಿ ೨೯

ಕೋಕನದ ಸಖಿನುದಯ ಘೂಕಾ
ಲೋಕನಕೆ ಸೊಗಸದಿರೆ ಭಾಸ್ಕರ
ತಾ ಕಳಂಕನೆ ಈ ಕೃಥಿಪಥಿ ಜಗನ್ನಾಥನಿರೆ
ಸ್ವೀಕರಿಸಿ ಸುಖಬಡಲರಿಯದವಿ
ವೇಕಿಗಳು ನಿಂದಿಸಿದರೇನಹು
ದೀ ಕವಿತ್ವವ ಕೇಳಿ ಸುಖಬಡದಿಹರೆ ಕೋವಿದರು ೩೦

ಚೇತನಾಚೇತನಗಳಲಿ ಗುರು
ಮಾತರಿಶ್ವಾಂತಗತ ಜಗ
ನ್ನಾಥ ವಿಠಲ ನಿರಂತರದಿ ವ್ಯಾಪಿಸಿ ತಿಳಿಸಿಕೊಳದೆ
ಕಾತುರವ ಪುಟ್ಟಿಸಿ ವಿಷಯದಲಿ
ಯಾತುಧಾನರ ಮೋಹಿಸುವ ನಿ
ಭೀತ ನಿತ್ಯಾನಂದಮಯ ನಿರ್ದೋಷ ನಿರವದ್ಯ ೩೧